೭

ಖುಷಿ ಓದಿಗಾಗಿ

# ಕಥಾ ಮಂಟಪ



ಇಲ್ಲಿನ ಕಥೆಗಳನ್ನು ನೀವೂ
ಓದಿರಿ; ಬೇರೆಯವರಿಗೂ
ಓದಿ ಹೇಳಿರಿ.

ಆಗಸ್ಟ್–ಸೆಪ್ಟೆಂಬರ್ ೨೦೧೯–೨೦

ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರ
Dhwani Educational Resource Centre

ಪೂರಣ ಯೋಜನೆ
Poorana 2019-20 Project
is Supported by Many
Individual Donors

ಈ ಸಲದ

# ಕಥೆಗಳು

* ಅಶೋಕನ ಕೊನೆಯ ದಿನಗಳು ೪

* ಮಗ್ದಲದ ಮರಿಯಳಿಗೆ ಯೇಸುವಿನ ಕರುಣೆ ೧೩

* ಪ್ರಾಣದೇವರು ನಾಟಕ ೨೨

* ಅಂಗುಲಿಮಾಲ ೨೭

* No one works for me ೩೦

ಇತಿಹಾಸ ಪಠ್ಯಪುಸ್ತಕದ ‘ಉತ್ತರ ಭಾರತದ ಪ್ರಮುಖ ರಾಜಮನೆತನಗಳು’ ಪಾಠಕ್ಕೆ ಪೂರಕ



# ಅಶೋಕನ ಕೊನೆಯ ದಿನಗಳು

ಅಶೋಕನು ತನ್ನ ಪ್ರಜೆಗಳನ್ನು ತನ್ನ ಸ್ವಂತ ಮಕ್ಕಳಂತೆ ಲಾಲಿಸಿ, ಪಾಲಿಸಿದನು. ಅವರೆಲ್ಲರಿಗೂ ಧರ್ಮದ ಮಾರ್ಗ ತಿಳಿಯಬೇಕೆಂದು, ತನ್ನ ಸಂದೇಶವನ್ನು ಕಲ್ಲಿನಲ್ಲಿ ಕೊರೆಯಿಸಿದ. ಬಂಡೆಗಳಿದ್ದ ಕಡೆ ಅವುಗಳ ಮೇಲೆ, ಅವು ಇಲ್ಲದ ಕಡೆ ಕಲ್ಲಿನ ಕಂಬಗಳನ್ನು ಬೇರೆ ಕಡೆಯಿಂದ ತರಿಸಿ, ಅವುಗಳ ಮೇಲೆ

ಧರ್ಮದ ಮಾತುಗಳನ್ನು ಕೊರೆಯಿಸಿದ. ಅವು 'ಅಶೋಕನ ಧರ್ಮ ಲಿಪಿಗಳು' ಎಂದು ಹೆಸರಾದುವು.

ಹೀಗೆ ಹಲವು ವರ್ಷಗಳು ಅಶೋಕನು ಸಾರ್ಥಕ ಜೀವನವನ್ನು ನಡೆಸಿದ. ಕಾಲಧರ್ಮಕ್ಕೆ ಅನುಸಾರವಾಗಿ ಅವನು ಮುದಿಯಾದನು. ಸಾವು ಸಮೀಪಿಸುತ್ತಿದೆ ಎಂದು ಅವನಿಗೂ ಗೊತ್ತಾಯಿತು.

ಆಗ ಅವನು 'ಭಿಕ್ಷುಗಳ ಸಂಘಕ್ಕೆ ಬಹಳವಾಗಿ ದಾನಮಾಡಿರುವವರು ಯಾರು?' ಎಂದು ಭಿಕ್ಷುಗಳನ್ನು ಕೇಳಿದ.

'ಗೃಹಸ್ಥನಾದ ಅನಾಥಪಿಂಡಿಕ, ಮಹಾರಾಜ.'

'ಅವನು ಎಷ್ಟುದಾನ ಮಾಡಿದ?'

'ಸಾವಿರ ಕೋಟಿ ಸುವರ್ಣ, ಮಹಾರಾಜ.'

'ಸಾಮಾನ್ಯ ಗೃಹಸ್ಥನಾದ ಅನಾಥಪಿಂಡಿಕನೇ ಅಷ್ಟು ದಾನ ಕೊಟ್ಟಿರುವಾಗ ಇಡೀ ಜಂಬೂದ್ವೀಪಕ್ಕೆ ಚಕ್ರವರ್ತಿಯಾದ ನಾನು

ಅಷ್ಟಾದರೂ ಕೊಡಬೇಕು' ಎಂದು ಅಶೋಕ ಸಂಕಲ್ಪಮಾಡಿದ.

ಅದರಂತೆ ಪ್ರಜೆಗಳ ಉದ್ಧಾರಕ್ಕಾಗಿ, ಅವರ ವಿದ್ಯಾಭ್ಯಾಸಕ್ಕಾಗಿ, ಭಿಕ್ಷುಗಳ ವಸತಿಗಳಿಗಾಗಿ, ಚೈತ್ಯಗಳ ಸ್ತೂಪಗಳ ನಿರ್ಮಾಣಕ್ಕಾಗಿ, ಕ್ಷೇತ್ರಗಳಲ್ಲಿ ಛತ್ರಗಳನ್ನು ಕಟ್ಟಿಸುವುದಕ್ಕೋಸ್ಕರ ಉದಾರವಾಗಿ ವೆಚ್ಚಮಾಡಲು ತೊಡಗಿದ. ಅವನು ಇದಕ್ಕಾಗಿ ವ್ಯಯಮಾಡಿದ್ದು ೯೬ ಕೋಟಿ ಆಯಿತು. ತನ್ನ ಸಂಕಲ್ಪ ಈಡೇರಲು ಇನ್ನೂ ನಾಲ್ಕು ಕೋಟಿ ಕೊಡುವುದು ಉಳಿದಿತ್ತು.

'ಆಡಿದ ಮಾತನ್ನು ಉಳಿಸಿಕೊಳ್ಳುವ ಮೊದಲೇ ಎಲ್ಲಿ ನಾನು ಸತ್ತು ಹೋಗುವೆನೋ!' ಎಂಬ ಅಂಜಿಕೆಯಿಂದ ಅಶೋಕನ ಮುಖ ಕಳೆಗುಂದಿತು.

ಮಂತ್ರಿಯಾದ ರಾಧಗುಪ್ತನು ದೊರೆಯ ಮುಖವನ್ನು ನೋಡಿದ. ಅವರಿಬ್ಬರೂ ಚಿಕ್ಕಂದಿನಿಂದ ಪರಸ್ಪರ ಬಲ್ಲವರು. 'ನಿನಗೆ ಏನು ಚಿಂತೆ, ದೊರೆಯೆ?' ಎಂದು ವಿಚಾರಿಸಿದ.

'ನನಗೆ ಸಾಯುವೆನೆಂಬ ಭಯವಿಲ್ಲ, ರಾಜ್ಯವನ್ನು ಬಿಟ್ಟು ಹೋಗಬೇಕೆಂಬ ವ್ಯಸನವಿಲ್ಲ. ಈ ಪ್ರಜೆಗಳ ಸೇವೆಯನ್ನು ಮಾಡುವ ಅವಕಾಶ ಮುಗಿಯುತ್ತಿದೆಯಲ್ಲಾ, ಈ ಭಿಕ್ಷುಗಳನ್ನು ಉಪಚರಿಸುವ ಭಾಗ್ಯ ಮುಗಿದು ಹೋಗುತ್ತದೆಯಲ್ಲಾ ಎಂದು ಕಳವಳವಾಗುತ್ತಿದೆ' ಎಂದ ಅಶೋಕ.

ಅದಕ್ಕೆ ರಾಧಗುಪ್ತನು ಏನಾದರೂ ಸಮಾಧಾನ ಹೇಳುವ ಮೊದಲೇ ಅಶೋಕನು ಮತ್ತೂ ಹೇಳಿದ:–

'ಇದಕ್ಕಿಂತ ದೊಡ್ಡದೊಂದು ಚಿಂತೆ ನನ್ನನ್ನು ಕಾಡುತ್ತಿದೆ. ಅದು ಏನೆಂದರೆ ನಾನು ವಾಗ್ದಾನ ಮಾಡಿದ ಹಾಗೆ ಇನ್ನೊಂದು ನಾಲ್ಕು ಕೋಟಿ ಸುವರ್ಣವನ್ನು ದಾನಮಾಡುವ ಮೊದಲು ನಾನು ಎಲ್ಲಿ ಮರಣಹೊಂದವೆನೋ ಎಂದು ಭಯವಾಗಿದೆ.'

ಸಾವಿನ ಭಯ ಅಶೋಕನಿಗೆ ಅತಿಯಾಯಿತು, 'ಆದಷ್ಟು ಕೂಡಲೆ ನಾನು ನನ್ನ ಮಾತನ್ನು ಪೂರೈಸಿಕೊಳ್ಳಬೇಕು' ಎಂದು ಕಣ್ಣಿಗೆ ಬಿದ್ದ, ಕೈಗೆ ಸಿಕ್ಕಿದ ಚಿನ್ನ, ಬೆಳ್ಳಿ ಮತ್ತು ರತ್ನ

ಮುಂತಾದವನ್ನು ಅವಸರವಸರವಾಗಿ ಕುಕ್ಕುಟಾರಾಮಕ್ಕೆ ಕಳಿಸಿಕೊಟ್ಟ.

ಅರಮನೆಯಲ್ಲಿ ಹೀಗೆ ಹಣದ ಹೊಳೆ ಹರಿದು ಹೋಗುತ್ತಿರುವುದನ್ನು ಗಮನಿಸಿ, ಮಂತ್ರಿಗಳು ಯುವರಾಜನಾದ ಸಂಪ್ರತಿಯ ಹತ್ತಿರ ಬಂದರು, ಸಂಪ್ರತಿ ಕುಣಾಲನ ಮಗ

'ಯುವರಾಜ! ಮುದುಕರಾದ ಮಹಾರಾಜರಿಂದ ಭಂಡಾರವೆಲ್ಲ ಬರಿದಾಗುತ್ತಿದೆ. ಇದನ್ನು ತಡೆಗಟ್ಟದೆ ಹೋದರೆ ನೀನು ರಾಜ್ಯವಾಳುವುದು ಕಠಿಣವಾಗುತ್ತದೆ' ಎಂದು ಚುಚ್ಚಿಕೊಟ್ಟರು.

ಅಂದಿನಿಂದ ಅಶೋಕನ ಕೈಗೆ ಏನೂ ಸಿಕ್ಕದ ಹಾಗೆ ಕಟ್ಟುಮಾಡಿದರು. ಈ ವೇಳೆಗೆ ಅಶೋಕ ಹಾಸಿಗೆಯಿಂದ ಏಳಲಾರದಷ್ಟು ನಿಶ್ಶಕ್ತನಾಗಿ ಕಾಯಿಲೆ ಮಲಗಿದ್ದ. ಬೇರೆ ಏನು ಮಾಡಲೂ ಶಕ್ತನಾಗದೆ, ತನಗೆ ಊಟಕ್ಕೆ ಹಾಕುತ್ತಿದ್ದ ಚಿನ್ನದ ತಟ್ಟೆ, ಬಟ್ಟಲುಗಳನ್ನು ದಾನಮಾಡತೊಡಗಿದ.

ಇದನ್ನು ಮಂತ್ರಿಗಳು ಸಂಪ್ರತಿಗೆ ತಿಳಿಸಿದರು. ಅಂದಿನಿಂದ ಅಶೋಕನಿಗೆ

ಲೋಹದ ತಟ್ಟೆ ಬಟ್ಟಲುಗಳಲ್ಲಿ ಬಡಿಸತೊಡಗಿದರು. ಅಶೋಕನು ಅದನ್ನೇ ದಾನ ಮಾಡುವುದನ್ನು ನೋಡಿ, ಕೊನೆಗೆ ಮಣ್ಣಿನ ಪಾತ್ರೆಗಳಲ್ಲಿ ಬಡಿಸತೊಡಗಿದರು.

ಶಕ್ತಿಯಿದ್ದಾಗ ಇಡೀ ಜಂಬೂದ್ವೀಪಕ್ಕೆ ಚಕ್ರವರ್ತಿಯಾಗಿದ್ದವನು ಈಗ ತನ್ನ ಅರಮನೆಯ ಕೋಣೆಯಲ್ಲಿ, ತನ್ನ ಹಾಸಿಗೆಯ ಮೇಲೆ ಸೆರೆಯಾಗಿದ್ದಾನೆ! ಅವನು ಮಾಡುವ ಪ್ರತಿಯೊಂದಕ್ಕೂ ಅಲ್ಲಿ ಸರ್ಪಕಾವಲು, ಅವರ ಕಣ್ಣು ತಪ್ಪಿಸಿ, ಆ ಕೋಣೆಯಿಂದ ಒಂದು ಚೂರು ಕಡ್ಡಿ ಹೊರಗೆ ಹೋಗುವಂತಿಲ್ಲ.

ಒಂದು ದಿನ ಅಶೋಕ ತನ್ನ ಮಂತ್ರಿಗಳನ್ನು ಕರೆದು ಮಂತ್ರಿಗಳೆ, ಈಗ ಜಂಬೂದ್ವೀಪದ ಚಕ್ರವರ್ತಿ ಯಾರು?' ಎಂದು ಕ್ಷೀಣಸ್ವರದಿಂದ ಕೇಳಿದ.

ರಾಧಗುಪ್ತನು ಕೈಮುಗಿದು 'ನೀನೆ, ಮಹಾರಾಜ' ಎಂದ.

ಅಶೋಕನು ನಿಟ್ಟುಸಿರುಬಿಟ್ಟು, 'ನನ್ನ ಶಕ್ತಿಯೆಲ್ಲಿ? ಸಾಮರ್ಥ್ಯವೆಲ್ಲಿ? ಪ್ರಭಾವವೆಲ್ಲಿ? ಈಗ ನಾನು ನಿರ್ಗತಿಕ, ನನ್ನ ಕೈಯಲ್ಲಿ ಒಂದು

ಕುರುಡು ಕವಡೆ ಕೂಡ ಇಲ್ಲ. ಇರುವುದೊಂದೇ ಈ ನೆಲ್ಲಿಯ ಕಾಯಿ? ಎಂದು ಕೈಯಲ್ಲಿದ್ದ ಕಾಯನ್ನು ತೋರಿಸಿದ.

'ಇಹಲೋಕದಲ್ಲಿ ಯಾವುದೂ ಶಾಶ್ವತವಲ್ಲ, ಎಲ್ಲವೂ ಅಧ್ರುವ- ಎಂದು ಭಗವಂತನು ಹೇಳಿದ ಮಾತು ಸುಳ್ಳಲ್ಲ. ಅದಕ್ಕೆ ನಾನೇ ಸಾಕ್ಷಿ' ಎಂದು ಒಬ್ಬ ದೂತನನ್ನು ಕರೆದು' ಅಪ್ಪಾ, ಈ ನೆಲ್ಲಿಯನ್ನು ಕೊಂಡುಹೋಗಿ ಕುಕ್ಕುಟಾರಾಮದ ಭಿಕ್ಷುಗಳಿಗೆ ಕೊಡು. ಇದೇ ನನ್ನ ಕೊನೆಯ ದಾನವೆಂದು ನನ್ನ ಪರವಾಗಿ ನಿವೇದಿಸು ಇದನ್ನು ಎಲ್ಲರೂ ಹಂಚಿಕೊಳ್ಳಬೇಕೆಂದು ನನ್ನ ಪರವಾಗಿ ಪ್ರಾರ್ಥಿಸು' ಎಂದ.

ಕುಕ್ಕುಟಾರಾಮದ ಭಿಕ್ಷುಗಳು ಆ ನೆಲ್ಲಿಯ ದಾನವನ್ನು ಸ್ವೀಕರಿಸಿದರು, ಅದನ್ನು ಪುಡಿಮಾಡಿ, ಅರೆದು ರಸದಲ್ಲಿ ಸೇರಿಸಿಕೊಂಡು ಕುಡಿದರು.

ಅಶೋಕನು ಮತ್ತೆ ತನ್ನ ಮಂತ್ರಿಗಳನ್ನು ಕೇಳಿದ 'ಈಗ ಜಂಬೂದ್ವೀಪಕ್ಕೆ ಯಾರು ಚಕ್ರವರ್ತಿ?'

ರಾಧಗುಪ್ತನು ಮತ್ತೆಯೂ 'ನೀನೇ, ಮಹಾರಾಜ!' ಎಂದ.

ಆಗ ಅಶೋಕನು ತನ್ನಲ್ಲಿ ಉಳಿದಿದ್ದ ಶಕ್ತಿಯೆಲ್ಲವನ್ನೂ ಒಟ್ಟುಗೂಡಿಸಿಕೊಂಡು ಎದ್ದು ಕುಳಿತ. ಸಮುದ್ರದಿಂದ ಸುತ್ತುವರಿಯಲ್ಪಟ್ಟ ಈ ಭೂಮಿಯನ್ನು ನಾನು ದಾನಕೊಡುತ್ತೇನೆ. ಈ ದಾನದಿಂದ ನನಗೆ ಸ್ವರ್ಗ ಬರಬೇಕಿಲ್ಲ, ಬ್ರಹ್ಮಲೋಕ ಬರಬೇಕಾಗಿಲ್ಲ, ಪುನಃ ನನಗೆ ಈ ಚಕ್ರವರ್ತಿ ಪದವಿಯೂ ಬರಬೇಕಿಲ್ಲ. ಈ ದಾನದಿಂದ ನನಗೆ ಶಾಶ್ವತವಾದ ಮನಃಶ್ಯಾಂತಿ ದೊರಕಿದರೆ ಸಾಕು.' ಎಂದ.

ಅಶೋಕನು ಹೀಗೆ ಪ್ರಾರ್ಥನೆ ಮಾಡಿಕೊಂಡು ಒಂದು ದಾನಶಾಸನವನ್ನು ಬರೆಸಿದ. ಅದರ ಪ್ರಕಾರ ಅವನ ರಾಜ್ಯವೆಲ್ಲ ಭಿಕ್ಷುಗಳಿಗೆ ದಾನವಾಗಿ ಹೋಯಿತು, ಇದು ಆದ ಕೂಡಲೇ ಅಶೋಕನು ಮರಣಹೊಂದಿದನು.

ಸೂತಕದ ದಿನಗಳು ಮುಗಿದ ಮೇಲೆ ಸಂಪ್ರತಿಗೆ ರಾಜ್ಯಾಭಿಷೇಕವಾಗಬೇಕಾಯಿತು. ಆಗ ರಾಧಗುಪ್ತನು ಅಶೋಕನ

ದಾನಶಾಸನವನ್ನು ಪ್ರಕಟ ಪಡಿಸಿದ, '೯೬ ಕೋಟಿ ದಾನಮಾಡಿದಾಗ ಭಂಡಾರಕ್ಕೆ ನೀವು ಬೀಗ ಹಾಕಿಸಿದಿರಿ, ಉಳಿದ ನಾಲ್ಕು ಕೋಟಿಗೆ ಬದಲಾಗಿ ಅಶೋಕನು ರಾಜ್ಯವನ್ನೇ ದಾನ ಮಾಡಿದ !' ಎಂದು ಹೇಳಿದ.

ಆಗ ಮಂತ್ರಿಗಳು ಭಂಡಾರದಿಂದ ನಾಲ್ಕು ಕೋಟಿ ದ್ರವ್ಯವನ್ನು ಭಿಕ್ಷುಗಳಿಗೆ ದಾನವಾಗಿ ಕೊಟ್ಟು, ರಾಜ್ಯವನ್ನು ಬಿಡಿಸಿಕೊಂಡರು. ಆದಾದಮೇಲೆ ಸಂಪ್ರತಿಗೆ ರಾಜ್ಯಾಭಿಷೇಕವಾಯಿತು.

**ಆಕರ: ಡಾ|| ಜಿ.ಪಿ. ರಾಜರತ್ನಂ ಸಮಗ್ರ ಮಕ್ಕಳ ಸಾಹಿತ್ಯ ಸಂಪುಟ–೨ ಪುರಾಣ –ಇತಿಹಾಸಗಳ ಕಥೆಗಳು**

**ಆಲೋಚಿಸು :**

* ಒಬ್ಬ ದೊಡ್ಡ ಸಾಮ್ರಾಟನಾಗಿ ಮೆರೆದ ಅಶೋಕ ಯಾಕೆ ತನ್ನ ಕೊನೆದಿನಗಳಲ್ಲಿ ಕಷ್ಟಪಡಬೇಕಾಯಿತು? ಚರ್ಚಿಸು.

# ಮಗ್ದಲದ ಮರಿಯಳಿಗೆ ಯೇಸುವಿನ ಕರುಣೆ

ಕನ್ನಡ ಪಠ್ಯ ಪುಸ್ತಕದಲ್ಲಿನ 'ಕೃಷ್ಣ–ಸುಧಾಮ' ಗದ್ಯದ ಕೊನೆಯಲ್ಲಿ 'ಏಸುಕ್ರಿಸ್ತನು ಮಗ್ದಲದ ಮರಿಯಳಿಗೆ ದಯೆ ತೋರಿದ ಘಟನೆ" ಓದಿ ಎಂಬ ಸಲಹೆ ಇದೆ. ಅದಕ್ಕೆ ಪೂರಕವಾಗಿ ಈ ಘಟನೆಯನ್ನು ಕೊಡಲಾಗಿದೆ. ಓದಿ ಆನಂದಿಸು.

ಬೆಥಾನಿಯ ಎಂಬ ಊರಿನಲ್ಲಿ ಲಾಸರ್ ಎಂಬವನು ಅಸ್ವಸ್ಥನಾಗಿದ್ದನು. ಈತನಿಗೆ ಮರಿಯ ಮತ್ತು ಮಾರ್ತ ಎಂಬ ಸಹೋದರಿಯರಿದ್ದರು. ಈ ಮೂವರೂ ಯೇಸು ಸ್ವಾಮಿಗೆ ಬಹಳ ಆಪ್ತರು, ಅಚ್ಚುಮೆಚ್ಚಿನವರಾಗಿದ್ದರು. ಮರಿಯ(ಮಗ್ದಲದ ಮರಿಯ) ಮತ್ತು ಮಾರ್ತಾ ಇಬ್ಬರೂ, ಯೇಸುಸ್ವಾಮಿಗೆ, "ಪ್ರಭುವೇ, ನಿಮ್ಮ ಆಪ್ತಮಿತ್ರನು ಅಸ್ವಸ್ಥನಾಗಿದ್ದಾನೆ" ಎಂದು ಹೇಳಿ ಕಳುಹಿಸಿದರು.

ಲಾಸರನ ಕಾಯಿಲೆಯ ಸುದ್ದಿಯನ್ನು ಕೇಳಿದ ಮೇಲೂ ಯೇಸು ತಾವಿದ್ದಲ್ಲಿಯೇ ಇನ್ನಷ್ಟು ದಿನ ಉಳಿದುಕೊಂಡರು. ಆನಂತರ

ತಮ್ಮ ಶಿಷ್ಯರಿಗೆ, "ನಮ್ಮ ಮಿತ್ರನಾದ ಲಾಸರನು ನಿದ್ರೆ ಮಾಡುತ್ತಿದ್ದಾನೆ, ಅವನನ್ನು ಎಬ್ಬಿಸಲು ನಾನು ಹೋಗಬೇಕು," ಎಂದು ನುಡಿದರು. ಶಿಷ್ಯರು, ಪ್ರಭುವೇ, ಅವನು ನಿದ್ರೆ ಮಾಡುತ್ತಿರುವವನಾದರೆ ಚೇತರಿಸಿಕೊಳ್ಳುತ್ತಾನೆ," ಎಂದರು. ಯೇಸು ಹೇಳಿದ್ದು ಅವನ ಮರಣವನ್ನು ಕುರಿತು. ಶಿಷ್ಯರಾದರೋ ಅದು ಸಾಮಾನ್ಯ ನಿದ್ರೆಯೆಂದು ತಿಳಿದುಕೊಂಡರು. ಆದುದರಿಂದ ಯೇಸು ಅವರಿಗೆ ಸ್ಪಷ್ಟವಾಗಿ, "ಲಾಸರನು ಸತ್ತು ಹೋಗಿದ್ದಾನೆ; ನಾನು ಅಲ್ಲಿ ಇಲ್ಲದೆ ಹೋದದ್ದು ಒಳ್ಳೆಯದೇ ಆಯಿತು. ನಿಮಗೆ ನನ್ನಲ್ಲಿ ವಿಶ್ವಾಸ ಮೂಡುವಂತೆ ಇದೆಲ್ಲಾ ನಡೆದಿದೆ. ಬನ್ನಿ ಅವನ ಬಳಿಗೆ ಹೋಗೋಣ," ಎಂದು ಬೆಥಾನಿಯಾಕ್ಕೆ ಹೊರಟರು.

ಯೇಸು ಬೆಥಾನಿಯಾಕ್ಕೆ ಬಂದಾಗ ಅದಾಗಲೇ ಲಾಸರನನ್ನು ಮಣ್ಣಿನಲ್ಲಿ ಹೂತು ನಾಲ್ಕು ದಿನಗಳಾಗಿವೆ ಎಂದು ತಿಳಿಯಿತು. ಜೆರುಸಲೇಮಿನಿಂದ ಬೆಥಾನಿಯಾ ಸುಮಾರು ಮೂರು ಕಿ.ಮೀ ದೂರವಿದೆ. ಮರಿಯಾ ಮತ್ತು ಮಾರ್ತಾಳಿಗೆ ಸಹೋದರನ ಮರಣಕ್ಕೆ ಸಂತಾಪ

ಹೇಳಲು ಅನೇಕರು ಅಲ್ಲಿಗೆ ಬಂದಿದ್ದರು. ಯೇಸುವು ಬರುತ್ತಲೇ ಮಾರ್ತ ಮತ್ತು ಮರಿಯರು ಯೇಸುವಿನ ಪಾದಕ್ಕೆರಗಿ "ಪ್ರಭುವೇ ನೀವು ಇಲ್ಲಿ ಇದ್ದಿದ್ದರೆ ನಮ್ಮ ಸಹೋದರ ಸಾಯುತ್ತಿರಲಿಲ್ಲ" ಎಂದು ಗೋಳಿಟ್ಟರು.

ಯೇಸುವಿಗೆ ಆ ಸಹೋದರಿಯರ ದುಃಖವನ್ನು ಕಂಡು ಮನ ಕರಗಿತು. ಅವರನ್ನು ಸಮಾಧಾನ ಪಡಿಸಿ ಲಾಸರನ ಸಮಾಧಿಯ ಬಳಿ ಬಂದು ಕಣ್ಣೀರಿಟ್ಟರು. ಲಾಸರನನ್ನು ಸಮಾಧಿ ಮಾಡಿದ್ದ ಸ್ಥಳ ಒಂದು ಗವಿಯಾಗಿತ್ತು; ಅದರ ಬಾಯಿಗೆ ಒಂದು ಕಲ್ಲನ್ನು ಮುಚ್ಚಲಾಗಿತ್ತು. ಯೇಸು, "ಆ ಕಲ್ಲನ್ನು ತೆಗೆಯಿರಿ" ಎಂದು ಆಜ್ಞಾಪಿಸಿದರು.

ಮೃತನ ಸಹೋದರಿಯಾದ ಮಾರ್ತಳು, "ಪ್ರಭುವೇ, ಅವನು ಸತ್ತು ನಾಲ್ಕು ದಿನಗಳಾದವು; ಈಗಾಗಲೇ ಅವನ ದೇಹ ಕೊಳೆತು ನಾರುತ್ತಿರಬೇಕು" ಎಂದಳು. "ನಿನಗೆ ವಿಶ್ವಾಸವಿದ್ದಲ್ಲಿ ದೇವರ ಮಹಿಮೆಯನ್ನು ಕಾಣುವೆ ಎಂದು ನಾನು ಹೇಳಲಿಲ್ಲವೆ?" ಎಂದು

ಮರು ನುಡಿದರು ಯೇಸು.

ಆಗ ಕಲ್ಲನ್ನು ತೆಗೆದು ಹಾಕಲಾಯಿತು. ಯೇಸು ಕಣ್ಣೆತ್ತಿ ಮೇಲಕ್ಕೆ ನೋಡಿ, “ಪಿತನೇ, ನನ್ನ ಪ್ರಾರ್ಥನೆಗೆ ನೀವು ಕಿವಿಗೊಡುತ್ತೀರಿ; ಆದುದರಿಂದ ನಾನು ನಿಮಗೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ” ಎನ್ನುತ್ತಾ ಗಟ್ಟಿಯಾದ ಧ್ವನಿಯಿಂದ, “ಲಾಸರನೇ, ಹೊರಗೆ ಬಾ.” ಎಂದು ಕೂಗಿದರು. ಸತ್ತಿದ್ದವನು ಕೂಡಲೇ ಹೊರಗೆ ಬಂದನು. ಮರಿಯ ಮತ್ತು ಮಾರ್ತಾಳಿಗೆ ಬಹಳ ಸಂತೋಷವಾಯಿತು.

ಆಗಾಗ ಯೇಸುಸ್ವಾಮಿಯು ತನ್ನನ್ನು ಶಿಲುಬೆಗೆ ಏರಿಸುವ ಹಾಗೂ ಸಾವಿನ ಮೂರು ದಿನಗಳ ನಂತರ ತಾವು ಮತ್ತೆ ಶಿಷ್ಯರಿಗೆ ದರ್ಶನ ನೀಡುವ ವಿಷಯವನ್ನು ಅನೇಕ ಬಾರಿ ಹೇಳಿದ್ದರು.

ಅದರಂತೆ ಯಹೂದ್ಯರು ಮುಂದೊಂದು ದಿನ ಯೇಸುಸ್ವಾಮಿಯನ್ನು ಗೋಲ್ಗೋಥಾ ಎಂಬಲ್ಲಿ ಶಿಲುಬೆಗೆ ಏರಿಸಿದರು. ಯೇಸುವಿನ ಜೊತೆ ಇನ್ನಿಬ್ಬರನ್ನೂ ಶಿಲುಬೆಗೆ ಏರಿಸಿದರು. ಯೇಸುವಿನ ಶಿಲುಬೆಯ ಬಳಿ

ಅವರ ತಾಯಿ, ಚಿಕ್ಕಮ್ಮ, ಮಗ್ದಲದ ಮರಿಯ ಹಾಗೂ ಶಿಷ್ಯ ಕ್ಲೋಪನ ಹೆಂಡತಿ ಮರಿಯಾ ನಿಂತಿದ್ದರು. ಯೇಸು ತಮ್ಮ ಶಿಷ್ಯನಿಗೆ ತಾಯಿಯನ್ನು ನೋಡಿಕೊಳ್ಳುವ ಜವಾಬ್ದಾರಿ ವಹಿಸಿದರು. ಯೇಸು ಸ್ವಾಮಿಯು ತಮಗೆ ದಾಹವಾಗಿದೆ ಎಂದಾಗ ಅಲ್ಲಿದ್ದವರು ಪಕ್ಕದಲ್ಲಿದ್ದ ಹುಳಿರಸದ ಪಾತ್ರೆಯಲ್ಲಿ ಸ್ಪಂಜನ್ನು ನೆನೆಸಿ ಹಿಸೋಪಗಿಡದ ಕೋಲಿಗೆ ಸಿಕ್ಕಿಸಿ ಯೇಸುವಿನ ಬಾಯಿಗೆ ತಾಗಿಸಿದರು. ಯೇಸುಸ್ವಾಮಿ ಆ ಹುಳಿರಸವನ್ನು ಸೇವಿಸುತ್ತಾ "ಎಲ್ಲಾ ನೆರವೇರಿತು" ಎಂದು ನುಡಿದರು. ಆಗ ಅವರ ಪ್ರಾಣಪಕ್ಷಿ ಹಾರಿಹೋಯಿತು.

ಯೇಸುವಿನ ಶರೀರವನ್ನು ಒಯ್ಯಲು ಅವರ ಶಿಷ್ಯನಾದ ಅರಿಮತಾಯ ಎಂಬ ಊರಿನ ಜೋಸೆಫ್ ಎಂಬುವವನು ಹಾಗೂ ನಿಕೋದೇಮನು ಪಿಲಾತನಿಂದ ಅಪ್ಪಣೆ ಪಡೆದರು. ಯಹೂದ್ಯರ ಪದ್ಧತಿಯಂತೆ ಶರೀರವನ್ನು ಗೋಲ್ಗೋಥಾ ಬಳಿಯಲ್ಲಿದ್ದ ತೋಟದಲ್ಲಿ ಸಮಾಧಿ ಮಾಡಿದರು.

ಅಂದು ಭಾನುವಾರ ಮುಂಜಾನೆ

ಇನ್ನೂ ಕತ್ತಲಾಗಿತ್ತು. ಮಗ್ದಲದ ಮರಿಯಳು ಸಮಾಧಿಯ ಬಳಿ ಬಂದಳು. ಸಮಾಧಿಯ ಬಾಗಿಲಿಗೆ ಮುಚ್ಚಲಾಗಿದ್ದ ಕಲ್ಲನ್ನು ತೆಗೆದಿರುವುದನ್ನು ಕಂಡಳು. ಆಕೆ ಯೇಸುವಿನ ಶಿಷ್ಯರಿಗೆ ಸಮಾಧಿಯಲ್ಲಿದ್ದ ಶವವನ್ನು ಯಾರೋ ಹೊತ್ತುಕೊಂಡು ಹೋಗಿದ್ದಾರೆ ಎಂದು ತಿಳಿಸಿದಳು. ಅವರು ಸಮಾಧಿಯ ಒಳಗೆ ಹೋಗಿ ನೋಡಿದರು. ಅಲ್ಲಿ ಶವ ಇರಲಿಲ್ಲ. ಆಗ ಅವರಿಗೆ ಯೇಸುಸ್ವಾಮಿಯ ವಾಕ್ಯ "ಯೇಸು ಸತ್ತ ಮೇಲೆ ಮರಳಿ ಜೀವಂತರಾಗಿ ಎದ್ದು ಬರಬೇಕು" ಎಂಬುದು ನೆನಪಿಗೆ ಬಂತು. ಅವರು ಮನೆಗೆ ಮರಳಿದರು.

ಆದರೆ ಮರಿಯಳು ಅಳುತ್ತಾ ಯೇಸುವಿನ ಸಮಾಧಿಯ ಹೊರಗೆ ನಿಂತುಕೊಂಡಿದ್ದಳು. ಆಕೆ ಅಳುತ್ತಾ ಸಮಾಧಿಯೊಳಗೆ ಬಗ್ಗಿ ನೋಡಿದಾಗ ಶ್ವೇತವಸ್ತ್ರಧಾರಿಗಳಾದ ಇಬ್ಬರು ದೇವದೂತರನ್ನು ಅಲ್ಲಿ ಕಂಡಳು. ಯೇಸುವಿನ ಪಾರ್ಥಿವ ಶರೀರವನ್ನು ಇಟ್ಟಿದ್ದ ಸ್ಥಳದಲ್ಲಿ, ಒಬ್ಬನು ತಲೆಯಿದ್ದ ಕಡೆಯಲ್ಲೂ ಮತ್ತೊಬ್ಬನು ಕಾಲಿದ್ದ ಕಡೆಯಲ್ಲೂ

ಕುಳಿತಿದ್ದರು. ಅವರು ಆಕೆಯನ್ನು, "ಏಕಮ್ಮಾ ಅಳುತ್ತಿರುವೇ?" ಎಂದು ಕೇಳಿದರು.

"ನನ್ನ ಪ್ರಭುವನ್ನು ತೆಗೆದುಕೊಂಡು ಹೋಗಿ ಬಿಟ್ಟಿದ್ದಾರೆ. ಎಲ್ಲಿ ಇಟ್ಟಿದ್ದಾರೋ ತಿಳಿಯದು," ಎಂದಳು. ಹಾಗೆ ಹೇಳಿ ಹಿಂದಕ್ಕೆ ತಿರುಗಿದಾಗ ಅಲ್ಲೇ ಯೇಸು ನಿಂತಿರುವುದು ಆಕೆಗೆ ಕಾಣಿಸಿತು. ಆದರೆ ಯೇಸುವೇ ಅವರೆಂದು ಆಕೆಗೆ ತಿಳಿಯಲಿಲ್ಲ.

ಯೇಸು, "ಏಕಮ್ಮಾ ಅಳುತ್ತಿರುವೇ? ಏನನ್ನು ಹುಡುಕುತ್ತಿರುವೇ?" ಎಂದು ಕೇಳಿದಾಗಲೂ ಮರಿಯಳು ಅವರು ತೋಟಗಾರನೆಂದು ಭಾವಿಸಿ, "ಅಯ್ಯಾ, ನೀವೇನಾದರೂ ಯೇಸುವನ್ನು ಕೊಂಡೊಯ್ದಿದ್ದರೆ ಎಲ್ಲಿ ಇಟ್ಟಿರುವಿರಿ, ಹೇಳಿ; ನಾನು ತೆಗೆದುಕೊಂಡು ಹೋಗುತ್ತೇನೆ," ಎಂದು ಹೇಳಿದಳು.

ಆಗ ಯೇಸು, "ಮರಿಯಾ" ಎಂದು ಹೆಸರಿಡಿದು ಕರೆದರು. ಆಕೆ ಹಿಂದಿರುಗಿ ನೋಡಿ, "ರಬ್ಬೂನಿ" ಎಂದಳು (ಯೆಹೂದ್ಯರ ಭಾಷೆಯಲ್ಲಿ ಹಾಗೆಂದರೆ "ಗುರುದೇವಾ"

ಎಂದರ್ಥ). ಯೇಸು ಆಕೆಗೆ, "ನನ್ನನ್ನು ಹಿಡಿದು ಕೊಂಡಿರಬೇಡ ನಾನು ಇನ್ನೂ ಪಿತನ ಬಳಿಗೆ ಏರಿಹೋಗಿಲ್ಲ. ನೀನು ನನ್ನ ಸಹೋದರರ ಬಳಿಗೆ ಹೋಗಿ ನನ್ನ ಪಿತನೂ ನಿಮ್ಮ ಪಿತನೂ ನನ್ನ ದೇವರೂ ನಿಮ್ಮ ದೇವರೂ ಆಗಿರುವಾತನಲ್ಲಿಗೆ ನಾನು ಏರಿ ಹೋಗುತ್ತೇನೆಂದು ತಿಳಿಸು,'' ಎಂದು ಹೇಳಿದರು.

ಮಗ್ದಲದ ಮರಿಯಳು ಶಿಷ್ಯರ ಬಳಿಗೆ ಬಂದು, "ನಾನು ಪ್ರಭುವನ್ನು ಕಂಡೆ. ಅವರು ಹೀಗೆಲ್ಲಾ ಹೇಳಿದರು," ಎಂದು ತಿಳಿಸಿದಳು. ಅದೇ ಭಾನುವಾರ ಸಂಜೆ ಶಿಷ್ಯರು ಒಂದು ಮನೆಯಲ್ಲಿ ಕೂಡಿದ್ದರು. ಯೆಹೂದ್ಯರಿಗೆ ಹೆದರಿ ಮನೆಯ ಕಿಟಕಿ ಬಾಗಿಲುಗಳನ್ನೆಲ್ಲಾ ಮುಚ್ಚಿದ್ದರು. ಆಗ ಯೇಸು ಒಳಗೆ ಬಂದು ಅವರ ಮಧ್ಯೆ ನಿಂತರು. "ನಿಮಗೆ ಶಾಂತಿ" ಎಂದು ಹೇಳಿದರು. ಪ್ರಭುವನ್ನು ಕಂಡ ಶಿಷ್ಯರಿಗೆ ಮಹಾ ಆನಂದವಾಯಿತು.

ಹೀಗೆ ಮಗ್ದಲದ ಮರಿಯಳ ಸತ್ತ ಸಹೋದರನ ಜೀವವನ್ನು ಮರಳಿಸಿ, ತಮ್ಮ

ಸಾವಿನ ನಂತರ ಮೊದಲಿಗೆ ಮಗ್ದಲದ ಮರಿಯಳಿಗೇ ತಮ್ಮ ದರ್ಶನವನ್ನು ನೀಡಿ ಯೇಸುಸ್ವಾಮಿಯು ಆಕೆಯನ್ನು ಕರುಣಿಸಿದರು.*

**ಆಕರ: ಪವಿತ್ರ ಬೈಬಲ್**

**ಯೊವಾನ್ನನು ಬರೆದ ಶುಭ ಸಂದೇಶ**

**ಆಲೋಚಿಸು :**

* ಏಸುಕ್ರಿಸ್ತನು ಮಗ್ದಲದ ಮರಿಯಳಿಗೆ ದಯೆ ತೋರಿದ ಘಟನೆ ಓದಿದಾಗ ನಿನಗೆ ಏನು ಅನಿಸಿತು.

**ಇತಿಹಾಸ ಪಠ್ಯಪುಸ್ತಕದ 'ವೇದಕಾಲ ಸಂಸ್ಕೃತಿ' ಪಾಠಕ್ಕೆ ಪೂರಕ**




(ಉಪನಿಷತ್ತುಗಳಲ್ಲಿ ಜೀವನದ ಸತ್ಯಕ್ಕೆ ಸಂಬಂಧಿಸಿದ ಚರ್ಚೆ, ಸಂಭಾಷಣೆಗಳು, ಕತೆಗಳು ಹೇರಳವಾಗಿ ಸಿಗುತ್ತವೆ. ಅವುಗಳಲ್ಲಿ ಒಂದು ಕತೆಯನ್ನು ಆಧರಿಸಿದ ಕಿರುನಾಟಕವನ್ನು ನಿಮಗಾಗಿ ಇಲ್ಲಿ ಕೊಡಲಾಗಿದೆ. ಇದನ್ನು ನೀವು ನಿಮ್ಮ ತರಗತಿಯಲ್ಲಿ, ಊರಿನಲ್ಲಿ ಆಡಬಹುದು)

**ದೃಶ್ಯ ವಿವರಣೆ**

**(ಕಾಡಿನಲ್ಲಿರುವ ಒಂದು ಆಶ್ರಮ. ಹಿನ್ನೆಲೆಯಲ್ಲಿ ಉಪನಿಷತ್ ಮಂತ್ರಘೋಷ ಕೇಳಿಬರುವುದು. ಶೌನಕ ಕೌಪೇಯ ಮತ್ತು ಅಭಿಪ್ರತಾರೀಕ್ಷ ಮುನಿಗಳು ಬರುವರು)**

**ಶೌನಕ :** ಅಭಿಪ್ರತಾರಿಗಳೇ, ದೇವತಾ ಪೂಜೆ, ಹವನ ಹೋಮ ಎಲ್ಲವೂ ಸಾಂಗವಾಗಿ ಮುಗಿದವು.

**ಅಭಿಪ್ರತಾರಿ :** ನಿಜ ಕೌಪೇಯ ಮುನಿಗಳೇ, ನಾವು ನಿತ್ಯ ಪೂಜಿಸುವ ವಾಯುದೇವನ ಆರಾಧನೆಯೂ ತುಂಬ ಸರಿಯಾಗಿ ಹಾಗೂ ಸೊಗಸಾಗಿ ಆಯಿತು. ಈಗ ಮಧ್ಯಾಹ್ನವಾಗಿದೆ. ಬನ್ನಿ ಊಟ ಮಾಡೋಣ.

**ಶೌನಕ :** ಹೌದು, ಬನ್ನಿ.

(ಬಾಳೆಎಲೆ ಹಾಕಿಕೊಂಡು, ಪದಾರ್ಥಗಳನ್ನು ಬಡಿಸಿಕೊಂಡು ಊಟ ಮಾಡಬೇಕೆನ್ನುವಷ್ಟರಲ್ಲಿ, ಒಂದು ಕೈಯಲ್ಲಿ ಕೋಲು, ಇನ್ನೊಂದು ಕೈಯಲ್ಲಿ ಭಿಕ್ಷಾಪಾತ್ರೆ ಹಿಡಿದ ಯುವಕನು ಬಾಗಿಲಲ್ಲಿ ಬಂದು ನಿಲ್ಲುತ್ತಾನೆ)

**ಶೌನಕ :** (ಆ ಯುವಕನನ್ನು ನೋಡಿ) ಏಯ್, ಏನೋ? ಏನ್ ನೋಡತಿದ್ದೀ? ಹೋಗು ಹೋಗಾಚೆ

**ಯುವಕ :** ಸ್ವಾಮಿ, ಮುನಿಗಳೇ, ಹೋಗುತೀನಿ. ಆದರೆ, ಹೋಗೋದಕ್ಕೆ ಮುಂಚೆ ತಮ್ಮಿಂದ ಒಂದೇ ವಿಷಯ ತಿಳಕೋಬೇಕಾಗಿತ್ತು.

**ಅಭಿಪ್ರತಾರಿ :** ಏನದು? ಬೇಗ ಕೇಳು.

**ಯುವಕ :** ತಾವು ದಿನಾಲು ದೇವರ ಪೂಜೆ ಮಾಡುತ್ತೀರಲ್ಲವೇ?

**ಇಬ್ಬರೂ :** ಹೌದು, ಏನೀಗ?

**ಯುವಕ :** ಏನಿಲ್ಲ, ಯಾವ ದೇವರನ್ನು

ಪೂಜಿಸುತ್ತೀರಿ, ಸ್ವಾಮಿ?

**ಅಭಿಪ್ರತಾರಿ** : ನೋಡಯ್ಯ, ನಮಗೆ ಊಟಕ್ಕೆ ಹೊತ್ತಾಗಿದೆ. ನಾವು ಪೂಜಿಸುವ ದೇವರು ಎಲ್ಲರ ಪ್ರಾಣವೂ, ಜೀವದ ಉಸಿರೂ ಆಗಿರುವ ವಾಯುದೇವರು, ತಿಳಿಯಿತೆ? ಇನ್ನು ಇಲ್ಲಿಂದ ಹೋಗು.

**ಯುವಕ** : ಸರಿ ಸ್ವಾಮಿ, ಆದರೆ ಆ ಪ್ರಾಣ, ವಾಂಯು ಇಡೀ ವಿಶ್ವದ ತುಂಬೆಲ್ಲ ಆವರಿಸಿಕೊಂಡಿದ್ದಾನೆ. ಹೌದು ತಾನೆ?

**ಶೌನಕ** : ಏಯ್, ತಲೆಹರಟೇ, ನಿನ್ನದು ಅತಿಯಾಯಿತು. ಅದೆಲ್ಲ ನಮಗೂ ಗೊತ್ತು. ಈಗ ನಿನ್ನ ದಾರಿ ಹಿಡಿದು ನೀನು ಹೋಗು.

**ಯುವಕ** : ಮುನಿವರ್ಯರೇ, ತಾವು ಪೂಜ್ಯರು, ಹಿರಿಯುರು. ಅದಕ್ಕೆ ಕೇಳುತ್ತಿದ್ದೇನೆ. ಇನ್ನೊಂದು ಪ್ರಶ್ನೆ. ನೀವು ಊಟ ಮಾಡುವ ಮೊದಲು ನೈವೇದ್ಯವನ್ನು ಯಾರಿಗೆ ಅರ್ಪಿಸುತ್ತೀರಿ?

**ಶೌನಕ** : ಈಗ ತಾನೆ ಹೇಳಲಿಲ್ಲವೇನೋ ದಡ್ಡ! ನಾವು ಆರಾಧಿಸುವ ಆ ಪ್ರಾಣದೇವರಿಗೆ, ಅಂದರೆ ವಾಯುದೇವರಿಗೆ ಅರ್ಪಿಸುತ್ತೇವೆ.

**ಯುವಕ** : ನಿಜ ತಾನೆ ಮುನಿಗಳೆ! ನೀವು ಆರಾಧಿಸುವ ಆ ವಾಯುದೇವ ಇಡೀ ಬ್ರಹ್ಮಾಂಡವನ್ನು ಆವರಿಸಿದ್ದಾನೆ ತಾನೆ!!

**ಅಭಿಪ್ರದಾರಿ** : ಹೌದು ಹೌದು. ಎಷ್ಟು ಸಲ ಹೇಳಬೇಕೋ ನಿನಗೆ?

**ಯುವಕ** : ತಾಳ್ಮೆ ಇರಲಿ ಮುನಿಗಳೆ. ಇಡೀ ಜಗತ್ತನ್ನ ಆವರಿಸಿರುವ ಆ ವಾಯುದೇವ, ಪ್ರಾಣದೇವ ನಿಮ್ಮಲ್ಲೂ ಇದ್ದಾನೆ ತಾನೆ?

**ಇಬ್ಬರೂ** : ಇದ್ದಾನೆ.

**ಯುವಕ** : ನನ್ನಲ್ಲೂ ಇದ್ದಾನೆ ತಾನೆ?

**ಇಬ್ಬರೂ** : ಇದ್ದಾನೆ.

**ಯುವಕ** : ಸರಿಯಾಗಿ ಹೇಳಿದಿರಿ. ನೀವು ಪೂಜಿಸುವ, ನೈವೇದ್ಯ ಅರ್ಪಿಸುವ ದೇವರು ನನ್ನಲ್ಲೂ ಇದ್ದಾನೆ ಅಂದಮೇಲೆ ನೀವು ನನಗೆ ಅನ್ನ ನೀಡುವುದಿಲ್ಲ ಎಂದರೆ ಏನು ಅರ್ಥ, ಪೂಜ್ಯರೇ? ದೇವರಿಗೆ ಅನ್ನ ನೀಡಲು ಒಲ್ಲೆ ಅಂದಂತೆ ಆಗುವುದಿಲ್ಲವೇ? ನಿಮ್ಮ ದೇವರು ಇದಕ್ಕೆ ಏನು ಹೇಳುತ್ತಾನೆ, ಸ್ವಾಮಿ?

**ಶೌನಕ** : (ಯೋಚಿಸಿ) ನಿಜ ನೀನು

ಹೇಳುತ್ತಿರುವುದು. ನಾವು ಪೂಜಿಸುವ ವಾಯುದೇವರು, ಪ್ರಾಣದೇವರು ನಮ್ಮಲ್ಲೂ, ನಿನ್ನಲ್ಲೂ ಎಲ್ಲರಲ್ಲೂ ಇದ್ದಾನೆ.

**ಅಭಿಪ್ರತಾರಿ :** ನಿಜ ಹೇಳಬೇಕು ಅಂದ್ರೆ, ಹಸಿವಿನ ಬಾಧೆಯಲ್ಲಿ ಈ ಸತ್ಯವನ್ನೇ ಮರೆತಿದ್ದವು. ಈಗ ನಮಗೆ ಸತ್ಯ ಅರಿವಾಯಿತು. ಬಾ, ಎಲ್ಲರೂ ಒಟ್ಟಿಗೇ ಊಟ ಮಾಡೋಣ.

**ಯುವಕ :** ಧನ್ಯವಾದಗಳು ಮುನಿಗಳೇ.

(ಎಲ್ಲರೂ ಒಟ್ಟಿಗೆ ಊಟಕ್ಕೆ ಕುಳಿತುಕೊಳ್ಳುತ್ತಾರೆ)*

**ಆಲೋಚಿಸು :**

* ಕಥೆಯ ಪ್ರಕಾರ ನಿಜವಾದ ದೇವರ ಪೂಜೆ ಎಂದರೇನು?

# ಅಂಗುಲಿ ಮಾಲ

ಕನ್ನಡ ಪಠ್ಯ ಪುಸ್ತಕದಲ್ಲಿನ 'ಕೃಷ್ಣ-ಸುಧಾಮ' ಗದ್ಯದ ಕೊನೆಯಲ್ಲಿ "ಬುದ್ಧನು ಅಂಗುಲಿಮಾಲನ ಮನಪರಿವರ್ತಿಸಿದ ಘಟನೆ" ಓದಿ ಎಂಬ ಸಲಹೆ ಇದೆ. ಅದಕ್ಕೆ ಪೂರಕವಾಗಿ ಈ ಕಥೆಯನ್ನು ಕೊಡಲಾಗಿದೆ. ಓದಿ ಆನಂದಿಸು.

ಕೋಸಲದಲ್ಲಿ ಅಂಗುಲಿಮಾಲ ಎಂಬ ಕಳ್ಳನಿದ್ದ. ಅವನು ಬಲು ಕ್ರೂರಿ. ಅವನು ಕಾಡಿನಲ್ಲಿದ್ದು ಅಲ್ಲಿಗೆ ಬಂದವರನ್ನು ಕೊಂದು ಅವರ ಬೆರಳುಗಳನ್ನು ಮಾಲೆ ಮಾಡಿ ಕೊರಳಿಗೆ ಹಾಕಿಕೊಳ್ಳುತ್ತಿದ್ದ. ಅವನ ಹಿಂಸೆ ತಾಳಲಾರದೆ ಜನರು ಬುದ್ಧನಲ್ಲಿ ಬಂದು ಬೇಡಿಕೊಂಡರು: ''ಸ್ವಾಮೀ, ಈ ಅಂಗುಲಿಮಾಲನ ಉಪಟಳವನ್ನು ಹೇಗಾದರೂ ಮಾಡಿ ತಪ್ಪಿಸಿ."

ಬುದ್ಧ ಯೋಚಿಸಿದ. ಶಿಕ್ಷೆಗೆ ಶಿಕ್ಷೆ ನೀಡಿದರೆ ಯಾವ ಉಪಯೋಗವೂ ಆಗುವುದಿಲ್ಲವೆಂದು ಅವನಿಗೆ ಗೊತ್ತಿತ್ತು. ದಯೆ, ಪ್ರೀತಿ, ಶಾಂತಿಗಳಿಂದ ಏನನ್ನು ಬೇಕಾದರೂ

ಜಯಿಸಬಹುದು ಎಂದು ಅವನು ಅಚಲವಾಗಿ ನಂಬಿದ್ದ.

ಹೀಗಾಗಿ ಬುದ್ಧ ಕಾಡಿಗೆ ಧೈರ್ಯದಿಂದ ಹೋದ. "ಯಾರಲ್ಲಿ?" ಎಂದು ಅಬ್ಬರಿಸಿದ ಅಂಗುಲಿಮಾಲ.

"ನನ್ನನ್ನು ಗೌತಮಬುದ್ಧ ಎನ್ನುತ್ತಾರೆ ತಮ್ಮ" ಎಂದ ಬುದ್ಧ ಶಾಂತನಾಗಿ. ಅದನ್ನು ಕಂಡು ಅಂಗುಲಿಮಾಲನಿಗೆ ಆಶ್ಚರ್ಯಆಯಿತು. "ಅಲ್ಲ, ನನ್ನನ್ನು ಕಂಡರೆ ಜನ ಥರಥರ ನಡಗ್ತಾರೆ. ನಿನಗೆ ಹೆದರಿಕೆಯೇ ಇಲ್ಲವೇ?" ಎಂದು ಕೇಳಿದ ಅಂಗುಲಿಮಾಲ.

"ಹೆದರಿಕೆಯೇಕೆ? ನೀನೂ ಒಬ್ಬ ಮನಷ್ಯನೇ ಅಲ್ಲವೆ? ನಿನಗಿನ್ನೂ ಬುದ್ಧಿಬಂದಿಲ್ಲ, ಅಷ್ಟೆ" ಅಂಗುಲಿಮಾಲ ಗೌತಮನನ್ನು ಸಿಟ್ಟಿನಿಂದ ಹೊಡೆಯಲು ಕತ್ತಿಯನ್ನು ಎತ್ತಿದ. ಆದರೆ ಅವನ ಶಾಂತಮುಖ ನೋಡಿ ಕತ್ತಿ ಕೆಳಗಿಳಿಯಿತು.

ಗೌತಮಬುದ್ಧ ಹೇಳಿದ; "ಅಂಗುಲಿಮಾಲ, ಇನ್ನೊಬ್ಬರನ್ನು ಕೊಲ್ಲುವುದರಿಂದ ನಿನಗಾಗುವ

ಪ್ರಯೋಜನವಾದರೂ ಏನು? ನಿನ್ನ ಪಾಪದ ಮೂಟೆ ಹೆಚ್ಚುತ್ತಾ ಹೋಗ್ತದೆ ಅಷ್ಟೆ. ನೀನು ಒಳ್ಳೆಯವನಾಗು. ಯೋಗ್ಯ ಮಾರ್ಗದಲ್ಲಿ ನಡೆ. ದೇವರು ನಿನಗೆ ಒಳ್ಳೇದನ್ನು ಮಾಡ್ತಾನೆ."

ಅಂಗುಲಿಮಾಲನಿಗೆ ಜ್ಞಾನೋದಯ ಆಯಿತು. ಕತ್ತಿಯನ್ನು ಬಿಸುಟು ಅವನು ಬುದ್ಧನ ಕಾಲಿಗೆ ನಮಸ್ಕರಿಸಿದ ; ಅವನ ಶಿಷ್ಯನಾದ *

**ಆಕರ: http://www.sirinudi.org**
**ಮೂಲ: ದಿನಕ್ಕೊಂದು ಕಥೆಗಳು**
**ಲೇಖಕರು: ಅನುಪಮಾನಿರಂಜನ**

**ಆಲೋಚಿಸು :**

* ಮನುಷ್ಯನ ಸೌಮ್ಯ ಸ್ವಭಾವಕ್ಕೆ ಮಹತ್ವ ಇದೆ ಎಂದು ನಿನಗೆ ಅನಿಸುತ್ತದೆಯೇ? ಏಕೆ?

# No one works for me



Hira lived all alone[1]. His children had grown[2] up and left for the town to take up jobs. His wife lived with their eldest son. Reluctant[3] to leave his village, Hira lived alone. Hira used to do odd jobs for the villagers. He was hard

**ಹೊಸಪದಗಳು;**

1. **Alone** (ಅಲೋೕನ್) – **ಒಬ್ಬಂಟಿಯಾಗಿ**
2. **Grow** (ಗ್ರೋ) – **ಬೆಳೆ**
3. **Reluctant** (ರಿಲಕ್ಟಂಟ್)– **ಇಷ್ಟವಿಲ್ಲದ, ಮನಸ್ಸಿಲ್ಲದ**

and he was in demand. He used to cook himself. He used to sing some dohas and he had his circle of fans in the village.

One evening, Hira was tired. He dropped the bundle of wood he was carrying[4] and sat down. He was also feeling lonely. He missed his sons and wife.

That evening, he was quiet[5] when he was with his friends. Somebody asked him why he was looking glum. Hira sighed[6]. “I work for everyone in the village. But does anyone care for me?” he blurted[7]

ಹೊಸಪದಗಳು;

4. **Carry** (ಕ್ಯಾರಿ) – ಒಯ್ಯಿ/ಹೊತ್ತು ಸಾಗಿಸು

5. **Quiet** (ಕ್ವೈಲಟ್) – ಮೌನ

6. **Sigh** (ಸೈ) – ನಿಟ್ಟುಸಿರು ಬಿಡು

7. **Blurt** (ಬ್ಲಟ್) ಹೇಳಿಬಿಡು, ಒದರಿಬಿಡು

work for others. But nobody works for me."

His friends knew he was not in a good mood that day. They kept quiet. Then one of the friends said, "Are you sure no one works for you, Hira?" he asked.

"You know my sons are away and they do not even write a post card to me. So, tell me who's working for me?"

"You earn[8] enough[9] to eat, don't you?" asked a friend with concern[10].

"Man does not live just to

**ಹೊಸಪದಗಳು;**

**8. Earn** (ಅನ್) – **ಸಂಪಾದಿಸು/ಗಳಿಸು**

**9. Enough** (ಇನ್‌ಫ್) – **ಸಾಕಷ್ಟು**

**10. Concern** (ಕನ್‌ಸನ್) – **ಸಂಬಂಧ/ಕಾಳಜಿ**

eat," snapped Hira.

"You eat ragi mudde (ball of steamed ragi flour), which means an unknown farmer is working for you so that you can eat. The grocer[11] works for you — he stocks grocery for you. The tailor works for you — he stitches shirt for you."

Another friend patted Hira. "Why, Hira, you are a Maharaja! So many people work for you."

Hira had tears in his eyes. "You are right, friends. I was a fool to think no one works for me," he said as he wiped[12] his tears[13].

**ಹೊಸಪದಗಳು;**

**11. Grocer** (ಗ್ರೋಸರ್) – **ಕಿರಾಣಿ/ದಿನಸಿ ವ್ಯಾಪಾರಿ**

**12. Wipe** (ವೈಪ್) – **ಒರೆಸುವುದು**

**13. Tears** (ಟಿಅರ್) – **ಕಣ್ಣೀರು**

"Alright, you can now work for us," said a friend. "Sing for us one of those dohas."

Hira began to sing.

**ಆಕರ:** https://kathakids.com/folktales-no-one-works-for-me-abafb026d897

## ನಮ್ಮ ಮಹದಾಶಯ:

ಕಥಾಮಂಟಪದಲ್ಲಿನ ಕಥೆಗಳನ್ನು ಓದಿ ನಿಮಗೆ ತುಂಬಾ ಖುಷಿಯಾಗುತ್ತಿದೆ, ಅಲ್ಲವೆ? ಕಥೆಗಳ ಕೊನೆಯಲ್ಲಿ ಅವುಗಳ ಆಕರಗಳನ್ನೂ ಕೊಡಲಾಗಿರುತ್ತದೆ. ಆ ಪುಸ್ತಕಗಳನ್ನು ಕೊಂಡು ಅಥವಾ ಗ್ರಂಥಾಲಯದಿಂದ ಎರವಲು ಪಡೆದು ಇನ್ನೂ ಹೆಚ್ಚಿನ ಕಥೆಗಳನ್ನು ಓದಿ ಆನಂದಿಸಲು ಸಾಧ್ಯವಾಗಲಿ ಎಂಬುದು ನಮ್ಮ ಮಹದಾಶಯ

**ಸಂಪರ್ಕ ಮಾಹಿತಿ:**

**ಧ್ವನಿ**

ಶೈಕ್ಷಣಿಕ ಸಂಪನ್ಮೂಲ ಕೇಂದ್ರ

# 76, 'ಪುಷ್ಪಾಂಜಲಿ' 3ನೇ ಅಡ್ಡರಸ್ತೆ,

ಶಿವಗಿರಿ, ಧಾರವಾಡ 580 007

ಮೊ: 99866 61055

dhwanitrust@gmail.com,
www.dhwanitrust.org

ಗಮನಿಸಿ : ಈ ಶೈಕ್ಷಣಿಕ ಸಂಪನ್ಮೂಲವನ್ನು ಕೇವಲ ಶೈಕ್ಷಣಿಕ ಉದ್ದೇಶಕ್ಕಾಗಿ ರೂಪಿಸಲಾಗಿದೆ. ಇದನ್ನು ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರದ ಪೂರ್ವಾನುಮತಿಯಿಲ್ಲದೇ ವಾಣಿಜ್ಯ ಉದ್ದೇಶಗಳಿಗಾಗಿ ಪುನರ್ಮುದ್ರಿಸುವುದಾಗಲೀ, ಬಳಸಿಕೊಳ್ಳುವುದಾಗಲೀ ನಿಷಿದ್ಧ. ಶೈಕ್ಷಣಿಕ ಉದ್ದೇಶದಿಂದ ಶಿಕ್ಷಕರು, ಪಾಲಕರು,ಸಂಪನ್ಮೂಲ ವ್ಯಕ್ತಿಗಳು ಇದನ್ನು ಉಪಯೋಗಿಸುವುದಾದರೆ ಧ್ವನಿ ಶೈ.ಸಂ.ಕೇಂದ್ರದ ಗಮನಕ್ಕೆ ತರವುದು ಅಪೇಕ್ಷಣೀಯ.